**ಕರ್ನಾಟಕ ಸರ್ಕಾರ**

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಇಮೈಲ್: commissioner.pue@gmail.com ಪೋನ್: 080 23561944 ಪ್ಯಾಕ್ಸ್: 23361852.


**ಜ್ಞಾಪನ**

**ವಿಷಯ:** ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಹೆಚ್ಚುವರಿ ತರಗತಿ ಕೊಠಡಿ/ಪ್ರಯೋಗಾಲಯ ಕೊಠಡಿ/ ಶೌಚಾಲಯ ಇತ್ಯಾದಿ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** 1.ಸರ್ಕಾರದ ಆದೇಶ ಸಂಖ್ಯೆ:ಇಡಿ 101 ಯೋಸಕ 2017 (ಭಾಗ-01) ಬೆಂಗಳೂರು ದಿನಾಂಕ: 13-09-2017.

2. ಆದೇಶಸಂಖ್ಯೆ: ಪಿಯುಇ/ಕಟ್ಟಡ-03/ಅನುಬಿ-01/ಲೆಶಿ-422/2017-18 ದಿನಾಂಕ: 18-12-2017.
3. ಆದೇಶಸಂಖ್ಯೆ: ಪಿಯುಇ/ಕಟ್ಟಡ-03/ಅನುಬಿ-01/ಲೆಶಿ-422/2017-18 ದಿನಾಂಕ: 16-01-2018.
4. .ಸರ್ಕಾರದ ಆದೇಶ ಸಂಖ್ಯೆ:ಇಡಿ 73 ಯೋಯೋಕ 2017 ಬೆಂಗಳೂರು ದಿನಾಂಕ: 28-09-2017. ಮತ್ತು ದಿನಾಂಕ05-01-2018

* * *

**ಪ್ರಸ್ತಾವನೆ:**

2017-18ನೇ ಸಾಲಿನಲ್ಲಿ ರಾಜ್ಯದ ಪರಿಶಿಷ್ಠ ಜಾತಿ ಮೀಸಲು ಕೇತ್ರದಲ್ಲಿ (ಎಸ್.ಸಿ.ಎಸ್.ಪಿ) ಬರುವ ಆಯ್ದ 44 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಲೆಕ್ಕಶೀರ್ಷಿಕೆ 4202-01-600-0-04-422 ರಡಿ ರೂ3350.00ಲಕ್ಷ (ಮೂರು ಸಾವಿರದ ಮೂರನೂರ ಐವತ್ತು ಲಕ್ಷ ಮಾತ್ರ)ಗಳಿಗೆ ಹೆಚ್ಚುವರಿತರಗತಿ ಕೊಠಡಿಗಳು/ಪ್ರಯೋಗಾಲಯ ಕೊಠಡಿ ಮತ್ತು ಶೌಚಾಲಯಗಳನ್ನು ನಿರ್ಮಿಸುವ ಕ್ರಿಯಾಯೋಜನೆಗೆ ಉಲ್ಲೇಖ(1)ರಲ್ಲಿ ಸರ್ಕಾರವು ಅನುಮೋದನೆ ನೀಡಿ ಅನುಷ್ಠಾನಗೊಳಿಸಲು ಶೇ.50 ರಷ್ಟು ಅನುದಾನ ಅಂದರೆ ರೂ 1675.00 (ಒಂದು ಸಾವಿರದ ಆರನೂರ ಎಪ್ಪತ್ತೈದು ಲಕ್ಷ ಮಾತ್ರ)ಲಕ್ಷಗಳ ಅನುದಾನ ಬಿಡುಗಡೆ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ

ಉಲ್ಲೇಖ(2)ರಲ್ಲಿ ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ ಆನಂದರಾವ್ ಸರ್ಕಲ್, ಬೆಂಗಳೂರು . ಇವರು ಸಲ್ಲಿಸಿರುವ 37 ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ ಲೆಕ್ಕ ಶೀರ್ಷಿಕೆ 4202-01-600-0-04-422 ರಡಿ ಬಿಡುಗಡೆಯಾಗಿರುವ 1675.00ಲಕ್ಷ (ಒಂದು ಸಾವಿರದ ಆರನೂರ ಎಪ್ಪತ್ತೈದು ಲಕ್ಷ ಮಾತ್ರ)ರೂ.ಗಳಲ್ಲಿ ರೂ1310.00(ಒಂದು ಸಾವಿರದ ಮೂರ ನೂರ ಹತ್ತು ಲಕ್ಷ ಮಾತ್ರ) ಲಕ್ಷ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ. ಹಾಗೂ ಉಲ್ಲೇಖ(3)ರಲ್ಲಿ 06 ಅಂದಾಜುಪಟ್ಟಿಗಳಿಗೆ ಆಡಳತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ರೂ337.50(ಮೂರನೂರ ಮೊವತ್ತೇಳುಲಕ್ಷ ಐವತ್ತು ಸಾವಿರ ಮಾತ್ರ) ಲಕ್ಷ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

ಉಲ್ಲೇಖ(4)ರಲ್ಲಿನ ಸರ್ಕಾರಿ ಆದೇಶದಂತೆ ನಿರ್ದೇಶಕರಿಗೆ ಅನುಮತಿಸಿರುವ ಮೊತ್ತದಲ್ಲಿ 43 ಅನುಮೋದಿತ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅನುಬಂಧದಲ್ಲಿರುವಂತೆ ಉಳಿದ ಬಾಕಿ ಶೇ.50ರಷ್ಟು ಅಂದರೆ ಒಟ್ಟು ರೂ1647.50 ಲಕ್ಷ ಗಳ ( ಒಂದು ಸಾವಿರದ ಆರನೂರ ನಲವತ್ತೇಳು ಲಕ್ಷ ಐವತ್ತು ಸಾವಿರ ಮಾತ್ರ)ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶಸಂಖ್ಯೆ: ಪಿಯುಇ/ಕಟ್ಟಡ-03/ಅನುಬಿ-01/ಲೆಶಿ-422/2017-18 ದಿನಾಂಕ: 12-02-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಉಲ್ಲೇಖ(2) ಮತ್ತು (3)ರಲ್ಲಿ 43 ಅಂದಾಜುಪಟ್ಟಿಗಳಿಗೆ ಆಡಳತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನಕ್ಕಾಗಿ ಲೆಕ್ಕ ಶೀರ್ಷಿಕೆ

4202-01-600-0-04-422 ರಡಿ ಶೇ.50.ರಷ್ಟು ರೂ.1647.50ಲಕ್ಷ ಗಳ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.ಉಲ್ಲೇಖ(4)ರ ಆದೇಶದಂತೆ ಸದರಿ ಕಾಮಗಾರಿಗಳಿಗೆ ಎರಡನೇ ಕಂತಾಗಿ ಬಾಕಿ ಉಳಿದ ಶೇ.50ರಷ್ಟು ಅಂದರೆ ಒಟ್ಟು ರೂ1647.50 ಲಕ್ಷ ಗಳ ( ಒಂದು ಸಾವಿರದ ಆರನೂರ ನಲವತ್ತೇಳು ಲಕ್ಷ ಐವತ್ತು ಸಾವಿರ ಮಾತ್ರ) ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

ಸದರಿ ಮೊತ್ತವನ್ನು ಅನುಬಂಧದಲ್ಲಿರುವಂತೆ ಜಿಲ್ಲಾಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಮೊತ್ತವನ್ನು ಅಪ್‌ಲೋಡ್ ಮಾಡಲು ಲೆಕ್ಕಪತ್ರಾಧಿಕಾರಿಗಳಿಗೆ ಸೂಚಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂದಿಸಿದ ಜಿಲ್ಲೆಗಳ ಉಪನಿರ್ದೇಶಕರುಗಳು, ಸ್ವೀಕೃತನ ರಶೀದಿಯ ಮೂಲಕ ಖಜಾನೆಯಿಂದ ಸೆಳೆದು ಸಂಬಂದಿಸಿದ ಜಿಲ್ಲೆಗಳ ವಿಭಾಗವಾರು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಇವರುಗಳಿಗೆ ಪಾವತಿಸುವುದು. ಈ ರೀತಿಯಾಗಿ ಪಾವತಿಸಿರುವ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಇವರು ಲೆಕ್ಕಶೀರ್ಷಿಕೆ 8443-00-108-0-00 ಸಾರ್ವಜನಿಕ ಕಾಮಗಾರಿಗಳ ಠೇವಣಿ ಖಾತೆಗೆ ಜಮಾ ಮಾಡಿಕೊಂಡು ನಿಯಮಾನುಸಾರ ಕ್ರಮವಹಿಸುವುದು.

ಈ ರೀತಿಯಾಗಿ ಬಿಡುಗಡೆ ಮಾಡಿರುವ ಮೊತ್ತವನ್ನು ಅನುಬಂಧದಲ್ಲಿ ತಿಳಿಸಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ ಕಾಮಗಾರಿಗಳಿಗೆ ಮಾತ್ರ ಉಪಯೋಗಿಸತಕ್ಕದ್ದು. ಅಲ್ಲದೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯದೆ ಯಾವುದೇ ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದಲ್ಲ. ಈ ನಿರ್ದೇಶನಾಲಯದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲು ಸೂಚಿಸಿದೆ.

**ಷರತ್ತುಗಳು**

1. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಚಲಿತ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಮಗ್ರಹಣೆಗಳಲ್ಲಿ ಪಾರದರ್ಶಕ ಅಧ್ಯಾದೇಶ 2000ರ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತವನ್ನು ಉಲ್ಲೇಖ(3)ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವ ಕಾಮಗಾರಿಗಳಿಗೆ ಮಾತ್ರ ಉಪಯೋಗಿಸತಕ್ಕದ್ದು.
3. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತದ ಕುರಿತಂತೆ ಭವಿಷ್ಯದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳಿಗೂ ಬದ್ಧರಾಗಿರತಕ್ಕದ್ದು.
4. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತದ ಕುರಿತಂತೆ/ಕಾಮಗಾರಿಗಳ ಅನುಷ್ಟಾನದ ಸಂಬಂದ ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಡುವೆ ಏನೆ ವಿವಾದ/ಬಿನ್ನಾಭಿಪ್ರಾಯಗಳು ಉಂಟಾದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ತೆಗದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.
5. ಹಾಲಿ ಬಿಡುಗಡೆ ಮಾಡಿರುವ ಮೊತ್ತಕ್ಕೆ ಮೊದಲು ಪೂರ್ಣ ಪ್ರಮಾಣದ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
6. ಬಿಡುಗಡೆ ಮಾಡುತ್ತಿರುವ ಮೊತ್ತಕ್ಕೆ ಸೂಕ್ತ ಲೆಕ್ಕಪತ್ರಗಳನ್ನು ಇರಿಸತಕ್ಕದ್ದು.
7. ಎರಡು ಭಾರಿ ಹಣ ಪಾವತಿಯಾಗದಂತೆ ನೋಡಿಕೊಳ್ಳತಕ್ಕದ್ದು.
8. ಕಾಮಗಾರಿಯನ್ನು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಪೂರ್ಣಗೊಳಿಸಲು ಸೂಚಿಸಿದೆ. ಬಿಡುಗಡೆ ಮಾಡುತ್ತಿರುವ ಮೊತ್ತವು ಮೇಲಿನ ಕಾಮಗಾರಿಗಳಿಗೆ ಹೊರತುಪಡಿಸಿ ಬೇರೆ ಯಾವುದೇ ಕಾಮಗಾರಿಗೆ ಬಳಸಬಾರದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ,

1. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ರಸ್ತೆ, ಬೆಂಗಳೂರು.
2. ಸಂಬಂಧಿಸಿದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ.
3. ಉಪನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ ರಸ್ತೆ, ಬೆಂಗಳೂರು.
4. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆಯವರುಗಳಿಗೆ.
5. ಸಂಬಂಧಿಸಿದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
8. ಹೆಚ್ಚುವರಿ/ಕಛೇರಿ ಪ್ರತಿ.

ಪ್ರತಿಗಳು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸಂಬಂಧಿಸಿದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

C:\Users\PALLAVI\Desktop\SOO1\amount released -scp- 2017-18 2nd istallment.docx

| | | | | | | | | | | |
|---|---|---|---|---|---|---|---|---|---|---|
| 9 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ.ಬೀದರ್ ಜಿಲ್ಲೆ. | FF 019 | ಹಾಣಮನೂರು ಔರಾದ್ | ಬೀದರ್ | 03 | 02 | 02 | 100.00 | 100.00 | ಬೀದರ್ | 50.00 |
| 10 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ದಾವಣಗೆರೆ ಜಿಲ್ಲೆ. | GD 031 | ಮಾಯಕೊಂಡ | ದಾವಣಗೆರೆ | 03 | 02 | 02 | 100.00 | 100.00 | ದಾವಣಗೆರೆ | 50.00 |
| 11 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಚಿತ್ರದುರ್ಗ ಜಿಲ್ಲೆ. | GG 052 | ಚಿಕ್ಕಜಾಜೂರು | ಚಿತ್ರದುರ್ಗ | 02 | 00 | 02 | 55.00 | 165.00 | ಚಿತ್ರದುರ್ಗ | 82.50 |
| 12 | | GG 090 | ಕಾಶಿಪುರ,ಹೊಳಲ್ಕೆರೆ | ಚಿತ್ರದುರ್ಗ | 02 | 00 | 02 | 55.00 | | | |
| 13 | | GG 169 | ಉಪ್ಪರಿಗೆನಹಳ್ಳಿ | ಚಿತ್ರದುರ್ಗ | 02 | 00 | 02 | 55.00 | | | |
| 14 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ | HH 016 | ಕಳಸ ಮೂಡಿಗೆರೆ | ಚಿಕ್ಕಮಗಳೂರು | 02 | 00 | 02 | 55.00 | 55.00 | ಚಿಕ್ಕಮಗಳೂರು | 27.50 |
| 15 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಗದಗ ಜಿಲ್ಲೆ. | JG 279 | ಶಿರಹಟ್ಟಿ | ಗದಗ್ | 02 | 00 | 02 | 55.00 | 55.00 | ಗದಗ | 27.50 |
| 16 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ.ಕಲುಬುರ್ಗಿ ಜಿಲ್ಲೆ. | KK 176 | ಔರಾದ(ಬಿ) | ಕಲಬುರ್ಗಿ | 02 | 00 | 02 | 55.00 | 155.00 | ಕಲಬುರ್ಗಿ | 77.50 |
| 17 | | KK 197 | ಕಮಲಾಪುರ | ಕಲಬುರ್ಗಿ | 03 | 02 | 02 | 100.00 | | | |
| 18 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಹಾಸನ ಜಿಲ್ಲೆ. | LL 038 | ರಾಯರಕೊಪ್ಪಲು, | ಹಾಸನ | 02 | 00 | 02 | 55.00 | 165.00 | ಹಾಸನ | 82.50 |
| 19 | | LL 155 | (ಬಾಲಕಿಯರ)ಸಕಲೇಶಪುರ | ಹಾಸನ | 02 | 00 | 02 | 55.00 | | | |
| 20 | | LL 166 | ಪಾಳ್ಯ, ಆಲೂರು ತಾ. | ಹಾಸನ | 02 | 00 | 02 | 55.00 | | | |

| | | | | | | | | | | | |
|---|---|---|---|---|---|---|---|---|---|---|---|
| 21 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ.ಕೋಲಾರ ಜಿಲ್ಲೆ. | MM 040 | [illegible] ಮುಳಬಾಗಿಲು | ಕೋಲಾರ | 02 | 00 | 02 | 55.00 | 265.00 | ಕೋಲಾರ | 132.50 |
| 22 | | MM 125 | ಅವನಿ.ಮುಳಬಾಗಿಲು | ಕೋಲಾರ | 02 | 00 | 02 | 55.00 | | | |
| 23 | | MM 141 | ಮುಡಿಯನೂರು,ಮುಳ ಬಾಗಿಲು | ಕೋಲಾರ | 02 | 00 | 02 | 55.00 | | | |
| 24 | | MM 143 | ಸುಂದರಪಾಳ್ಯ, ಬಂಗಾರಪೇಟೆ | ಕೋಲಾರ | 03 | 02 | 02 | 100.00 | | | |
| 25 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಚಾಮರಾಜನಗರ ಜಿಲ್ಲೆ. | NC 239 | ಸಂತೇಮಾರಳ್ಳಿ ಕೊಳ್ಳೇಗಾಲ | ಚಾಮರಾಜನಗರ | 03 | 02 | 02 | 100.00 | 100.00 | ಚಾಮರಾಜನ ಗರ | 50.00 |
| 26 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ.ಮೈಸೂರು ಜಿಲ್ಲೆ. | NN 110 | ಮೂಗೂರು. ಟಿ ಎನ್ ಪುರ | ಮೈಸೂರು | 02 | 00 | 02 | 55.00 | 265.00 | ಮೈಸೂರು | 132.50 |
| 27 | | NN 114 | ಹಡಿಯಾಲ, ನಂಜನಗೂಡು | ಮೈಸೂರು | 02 | 00 | 02 | 55.00 | | | |
| 28 | | NN 077 | ಬಾಲಕಿಯರ ನಂಜನಗೂಡು. | ಮೈಸೂರು | 05 | 02 | 04 | 155.00 | | | |
| 29 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಮಂಡ್ಯ ಜಿಲ್ಲೆ. | PP 141 | ಕಿರುವಾಗಿಲು ಮಳವಳ್ಳಿ | ಮಂಡ್ಯ | 02 | 00 | 02 | 55.00 | 55.00 | ಮಂಡ್ಯ | 27.50 |
| 30 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಕೊಪ್ಪಳ ಜಿಲ್ಲೆ. | RK 152 | ನವಲಿ,ಗಂಗಾವತಿ | ಕೊಪ್ಪಳ | 02 | 00 | 02 | 55.00 | 55.00 | ಕೊಪ್ಪಳ | 27.50 |
| 31 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ರಾಯಚೂರು ಜಿಲ್ಲೆ. | RR 013 | ಲಿಂಗಸಗೂರು | ರಾಯಚೂರು | 03 | 02 | 02 | 100.00 | 155.00 | ರಾಯಚೂರು | 77.50 |
| 32 | | RR 021 | ಮುದಗಲ್ | ರಾಯಚೂರು | 02 | 00 | 02 | 55.00 | | | |
| 33 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ದಕ್ಷಿಣ ಜಿಲ್ಲೆ. | SS 047 | ಬೆಳ್ಳಾರೆ,ಸೂಳ್ಯ ತಾ | ದಕ್ಷಿಣ ಕನ್ನಡ | 03 | 02 | 02 | 100.00 | 155.00 | ಮಂಗಳೂರು (ದ.ಕ.) | 77.50 |
| 34 | | SS 115 | ಕಡಬ ಪುತ್ತೂರು | ದಕ್ಷಿಣ ಕನ್ನಡ | 02 | 00 | 02 | 55.00 | | | |

| | | | | | | | | | | | |
|---|---|---|---|---|---|---|---|---|---|---|---|
| 35 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ.ಶಿವಮೊಗ್ಗ ಜಿಲ್ಲೆ. | TT 068 | [illegible] | ಶಿವಮೊಗ್ಗ | 02 | 00 | 02 | 55.00 | 210.00 | ಶಿವಮೊಗ್ಗ | 105.00 |
| 36 | | TT 084 | ಅನವೇರು ಭದ್ರಾವತಿ | ಶಿವಮೊಗ್ಗ | 02 | 00 | 02 | 55.00 | | | |
| 37 | | TT.134 | ಕುಂಸಿ | ಶಿವಮೊಗ್ಗ | 03 | 02 | 02 | 100.00 | | | |
| 38 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ತುಮಕೂರು ಜಿಲ್ಲೆ. | UU 059 | ಹೊಳವನಹಳ್ಳಿ, ಕೊರಟಗೆರೆ | ತುಮಕೂರು | 02 | 00 | 02 | 55.00 | 265.00 | ಮಧುಗಿರಿ | 132.50 |
| 39 | | UU 251 | ತೀತಾ ಕೊರಟಗೆರೆ | ತುಮಕೂರು | 02 | 00 | 02 | 55.00 | | | |
| 40 | | UU 014 | ಪಾವಗಡ | ತುಮಕೂರು | 05 | 02 | 04 | 155.00 | | | |
| 41 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ವಿಜಯಪುರ ಜಿಲ್ಲೆ. | EE238 | ಹೊನ್ನುಟಗೆ.ಬಿಜಾಪುರ ತಾಲ್ಲೋಕು | ವಿಜಯಪುರ | 02 | 00 | 02 | 55.00 | 55.00 | ವಿಜಯಪುರ | 27.50 |
| 42 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಬಳ್ಳಾರಿಜಿಲ್ಲೆ. | CC131 | ಕೊಟ್ಟೂರು, ಕೂಡ್ಲಗಿ ತಾ. | ಬಳ್ಳಾರಿ ಜಿಲ್ಲೆ | 03 | 02 | 02 | 100.00 | 100.00 | ಹಡಗಲಿ | 50.00 |
| 43 | ಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಹಾವೇರಿ ಜಿಲ್ಲೆ. | JH269 | ಬಾಲಕಿಯರ ಹಾವೇರಿ | ಹಾವೇರಿ | 05 | 02 | 04 | 155.00 | 155.00 | ಹಾವೇರಿ | 77.50 |
| | | | ಒಟ್ಟು | | | | | | **3295.00** | | **1647.50** |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ